ತಾಸಿನ ಪಯಣವನ್ನು ನಿಂತೇ ಮಾಡಿದನು. ಸೀಟು ಖಾಲಿಯಾದರೂ ಕೂರಲಿಲ್ಲ.

ನಾನಾದರೂ ಎಲ್ಲಿ ತಪ್ಪಾಗುವುದೊ ಎಂಬ ಹಿಂಜರಿಕೆಯಲ್ಲೇ ವರ್ತಿಸುತ್ತಿದ್ದೆ. 'ಮಾಡರ್ನ್ ಟೈಮ್ಸ್' ಚಿತ್ರದಲ್ಲಿ, ನಾಯನ್ನು ತೊಡೆಯ ಮೇಲೆ ಕೂರಿಸಿಕೊಳ್ಳುವ ಕುಲೀನ ಮಹಿಳೆ, ಖೈದಿಯಾಗಿರುವ ಚಾಪ್ಲಿನ್‌ನನ್ನು ತಿರಸ್ಕಾರದಿಂದ ನೋಡುವ ದೃಶ್ಯ ಸ್ಮೃತಿಪಟಲದ ಮೇಲೆ ಹಾಯುತ್ತಿತ್ತು. ಐರೋಪ್ಯರ ಅತಿಶಿಸ್ತಿನೊಳಗಿನ ಕೃತಕತೆಯನ್ನು ಅವನಂತೆ ಗೇಲಿಗೊಳಿಸಿದವರು ಬೇರೆಯಿಲ್ಲ. ನಾನೆಷ್ಟೇ ಎಚ್ಚರವಹಿಸಿದರೂ ಅಪಾರ್ಟಮೆಂಟಿನ ಹೆಬ್ಬಾಗಿಲು ತೆಗೆದು ಒಳಹೋಗುವಾಗ ಎಬ್ಬಿಸಿದ ಗದ್ದಲಕ್ಕೆ, ಒಬ್ಬ ಮುದುಕಿ ಮುಖ ಸಿಂಡರಿಸಿದಳು. ಕ್ಷಮೆ ಕೇಳಿದರೂ ಜರ್ಮನ್ ಭಾಷೆಯಲ್ಲಿ ಗೊಣಗಾಡಿದಳು. ಹಾದಿಹೋಕರಲ್ಲಿ ಏನಾದರೂ ವಿಚಾರಣೆ ಮಾಡಿದರೆ, ಕೆಲಸದ ತುರ್ತಿನಲ್ಲಿದ್ದರಿಂದಲೊ, ಇಂಗ್ಲಿಷ್ ಬಾರದ ಕಾರಣದಿಂದಲೊ, ನಿರ್ಲಿಪ್ತ ಭಾವದಲ್ಲಿ ಮುಂದೆಹೋಗುತ್ತಿದ್ದರು. ವಲಸೆಗಾರರು ದೇಶವನ್ನು ಆಕ್ರಮಿಸುತ್ತಿದ್ದಾರೆಂಬ ಬೇಸರವೇ? ಮಹಾಯುದ್ಧದಲ್ಲಿ ಮೂರಾಬಟ್ಟೆಯಾದ ದೇಶವನ್ನು ಮತ್ತೆ ಕಟ್ಟಲು ರೂಢಿಸಿಕೊಂಡ ಸಂಕಲ್ಪಿತ ಶಿಸ್ತೇ? ಕರಾಳ ಚರಿತ್ರೆಯ ಭಾರ ಜನರನ್ನು ಮೌನಗೊಳಿಸಿದೆಯೊ?

ಈ ಪ್ರಶ್ನೆಗೆ ಜವಾಬು ಹುಡುಕುವಂತೆ ನಾನು ಜರ್ಮನ್ನರ ದೋಷಗಳ ಪತ್ತೇದಾರಿಕೆ ಮಾಡುತ್ತಿದ್ದೆ. ನನ್ನ ಸುಡುವ ಆತ್ಮಕ್ಕೆ ಸಮಾಧಾನ ಕೊಡುವಂತೆ ನಮ್ಮ ಬಿಡಾರವಿದ್ದ ಕಡೆ ಕೆಲವು ಭಿಕ್ಷುಕರು ಕಂಡರು; ಸಾರ್ವಜನಿಕ ಜಾಗಗಳಲ್ಲಿ ಗಲಭೆ ಮಾಡುವ ಪೋಕರಿಗಳನ್ನು ನೋಡಿದೆವು; ಬೀದಿಯ ಮೇಲೆ ಸಿಗರೇಟಿನ ತುಣುಕುಗಳಿದ್ದವು. ಎಲ್ಲ ಜರ್ಮನರೂ ಪ್ರಾಮಾಣಿಕರಲ್ಲ ಎನ್ನುವುದೂ ತಿಳಿಯಿತು. ಇಲ್ಲದಿದ್ದರೆ ಮ್ಯೂನಿಕಿಗರು, ಮರಕ್ಕೆ ಎಮ್ಮೆ ಕಟ್ಟಿಹಾಕುವಂತೆ, ಸೈಕಲ್ಲುಗಳನ್ನು ಬೀದಿಕಂಬಗಳಿಗೆ ಕಟ್ಟಿ ಬೀಗ ಹಾಕಿ ಹೋಗುವ ಅಗತ್ಯವೇನಿದೆ? ಮೆಟ್ರೊದಲ್ಲಿ ಕೆಲವು ಜರ್ಮನ್ ಯುವಕರು ಟಿಕೇಟಿಲ್ಲದೆ ಸಿಕ್ಕಿಬಿದ್ದರು. ತಲಾ ಅರವತ್ತು ಯೂರೊ ದಂಡವಂತೆ. ಟಿಕೆಟ್ ಇನ್‌ಸ್ಪೆಕ್ಟರಳಾಗಿದ್ದ ಚೆಲುವೆ, ತನ್ನ ಹಿಂದಿದ್ದ ಬಲಿಷ್ಠ ಮೈಕಟ್ಟಿನ ಪೋಲಿಸರಿಗೆ ಸನ್ನೆ ಮಾಡಲು, ಅವರು ಯುವಕರನ್ನು —ಅವರ ಮುಖದಲ್ಲಿ ಚೆಲುವೆಯಿಂದ ದಸ್ತಗಿರಿಗೆ ಒಳಗಾದ ಸಂತೋಷವೇ ಕಂಡಿತು ಕೆಳಗಿಳಿಸಿಕೊಂಡು ಹೋದರು.

ಗಾಂಭೀರ್ಯ ಹೆಚ್ಚಾದರೆ ಉಸಿರುಗಟ್ಟಿಸುತ್ತದೆ. ಜರ್ಮನರ ಅತಿಶಿಸ್ತು, ಫ್ರಾನ್ಸ್, ಇಟಲಿ. ಅಮೆರಿಕಗಳಿಂದ ಬಂದವರಿಗೆ ಇಷ್ಟವಾಗುವುದಿಲ್ಲವಂತೆ. ದಿಟ, ಮ್ಯೂನಿಕ್ಕಿನ ಬಿಗುವು ಯೂರೋಪಿನ ಇತರೆ ಶಹರಗಳಲ್ಲಿ ನಮಗೆ ಕಾಣಲಿಲ್ಲ. ಆಮ್‌ಸ್ಟರ್‌ಡ್ಯಾಮಲ್ಲಂತೂ ಫುಟ್‌ಬಾಲ್ ಪ್ರೇಕ್ಷಕರು ತಂತಮ್ಮ ಕ್ಲಬ್ಬುಗಳ ಝುಂಡಾ ಹಿಡಿದು, ಚಿಪ್ಸು ತಿನ್ನುತ್ತ, ಬೀರು ಕುಡಿಯುತ್ತ, ಕಸ ಚೆಲ್ಲುತ್ತ ಗಲಭೆ ಎಬ್ಬಿಸಿಕೊಂಡು ಸ್ಟೇಡಿಯಂನತ್ತ ಧಾವಿಸಿದರು. ಅದೊಂದು ಉನ್ಮತ್ತ



ಕಪ್ಪು ವರ್ಣದ ಬೀದಿ ಬದಿ ಮಾರಾಟಗಾರ

ವಿಲಾಸಿಗಳ ಭೋಗಭೂಮಿ. ರೋಮಿನಲ್ಲಿ ನಮ್ಮ ಬಿಡಾರದ ಒಡತಿಯಾಗಿದ್ದ ಗೇಬ್ರಿಯಾಲಾ, 'ನಾವು ಜರ್ಮನ್ನರಂತೆ ನಿಯಮಕ್ಕಾಗಿ ಸಾಯುವವರಲ್ಲ. ಈಜಿಪ್ಟಿನವರಂತೆ ನಿಯಮರಹಿತರೂ ಅಲ್ಲ. ನಡುವೆ ಇದ್ದೇವೆ' ಎಂದಳು.

ಬಿಗುವು ಮ್ಯೂನಿಕ್ಕಿಗರ ಸಾರ್ವತ್ರಿಕ ಲಕ್ಷಣವೇನೂ ಆಗಿರಲಿಲ್ಲ. ಮೊದಲಿಗೆ ಬಿಗಿಹುಬ್ಬಿನಿಂದ ವರ್ತಿಸುವ ಅವರು ಬಳಿಕ ಆತ್ಮೀಯರಾಗುವುದುಂಟು. ಹೊಸ ಪೀಳಿಗೆಯು ನಮ್ಮನ್ನು ಅನ್ಯಭಾವದಲ್ಲಿ ನೋಡುತ್ತಿರಲಿಲ್ಲ. ನಾವು ಮುಖನೋಡಿ ಮುಗುಳುನಕ್ಕರೆ ಅದು ಸ್ವೀಕಾರಗೊಂಡು ನಮಗೆ ಮರಳುತ್ತಿತ್ತು. ಹಾಗೆಕಂಡರೆ ಜರ್ಮನಿಯಲ್ಲಿದ್ದ ಭಾರತೀಯರೇ ನಮ್ಮ ಮುಗುಳುಹಾಸಕ್ಕೆ ಸ್ಪಂದಿಸುತ್ತಿರಲಿಲ್ಲ. ಬರ್ಲಿನ್ ಏರ್‌ಪೋರ್ಟಿನಲ್ಲಿ ಕಾಯುತ್ತಿರುವಾಗ, ಲೆದರ್ ಜಾಕೆಟ್ಟನ್ನು ತೊಟ್ಟಿದ್ದ ಬಾನು ಮತ್ತು ಲತಾ ಅವರಿಗೆ ಒಬ್ಬಾಕೆ, 'ನಿಮಗೆ ಸೆಕೆಯಾಗುತ್ತಿಲ್ಲವೇ? ನಮಗಂತೂ ಬಿಸಿಲು ಬಂದಿರುವುದು ಖುಷಿಯಾಗಿದೆ' ಎಂದಳು. ಆಕೆ ಫ್ಯಾಶನ್ ಡಿಸೈನರಂತೆ. ಸರಿ, ವಿಮಾನ ಬರುವ ತನಕ, ಮದುವೆ ಮನೆಯಲ್ಲಿ ಸಿಕ್ಕ ಹಳೆಯ ಗೆಳತಿಯರಂತೆ, ಮೂವರೂ ಹರಟಿದರು. ನಾವು ಮ್ಯೂನಿಕ್ ವಿಶ್ವವಿದ್ಯಾಲಯಕ್ಕೆ ಯಾವ ದಿಕ್ಕಿಗೆ ಹೋಗಬೇಕು ಎಂಬ ಗಲಿಬಿಲಿಯಲ್ಲಿರುವಾಗ, ಒಬ್ಬ ತಾನಾಗೇ ಬಂದು ವಿಚಾರಿಸಿ, ವಿಶ್ವವಿದ್ಯಾಲಯವಿರುವ ದಿಕ್ಕನ್ನು ತೋರಿಸಿದನು; ಒಬ್ಬ ತಾತನಿಗೆ ಮ್ಯೂಸಿಯಮ್ಮಿನ ದಾರಿ ಕೇಳಿದಾಗ, ಹತ್ತು ನಿಮಿಷದ ತನಕ ಸಾವಧಾನವಾಗಿ ವಿವರಿಸಿತು; ನಿರ್ವಾಹಕರಿಲ್ಲದ ರೈಲು ಬಸ್ಸುಗಳಲ್ಲಿ ಯಂತ್ರದಿಂದ ಟಿಕೇಟು ಪಡೆಯಲು ಪರದಾಡುವಾಗ, ಕೆಲವರು ನೆರವಾಗುತ್ತಿದ್ದರು. ಹಿರೀಕರು ಕಷ್ಟಪಟ್ಟು ರೂಢಿಸಿರುವ ಶಿಸ್ತನ್ನು ಭಂಗಿಸಲೆಂದೇ ಹುಟ್ಟಿದಂತಿದ್ದ ಯುವಕ



ಮ್ಯೂನಿಕ್ ವಿಶ್ವವಿದ್ಯಾಲಯ

ಯುವತಿಯರು, ಟ್ರಾಮುಗಳಲ್ಲಿ ವೈನುಬೀರುವಿನ ಸೀಸೆ ಹಿಡಿದು ಕುಡಿಯುತ್ತ ಗಲಭೆ ಎಬ್ಬಿಸಿದ್ದರು. ಬಿಳಿಯರ ಅತಿಶಿಸ್ತಿನ ವಿರುದ್ಧ ಮುಯ್ಯಿ ತೀರಿಸುವಂತೆ ಜರ್ಮನಿಯ ಕಪ್ಪುವರ್ಣೀಯರು, ಸ್ವಚ್ಛಂದತೆಯಿಂದ ಕೆನೆಯುತ್ತಿದ್ದರು.

ಯಾವುದೇ ದೇಶದ ಮೇಲೆ ಪ್ರವಾಸಿಗರು ತಾವು ಕಂಡ ಕೆಲವೇ ನಿದರ್ಶನಗಳಿಂದ ತೀರ್ಪುಕೊಡುವುದು ತರವಲ್ಲ. ಎರಡನೇ ಮಹಾಯುದ್ಧದ ತರುವಾಯ ವೈಮಾನಿಕ ತರಬೇತಿಗಾಗಿ ಜರ್ಮನಿಗೆ ಹೋಗಿದ್ದ ಹೊ.ವೆ. ಶ್ರೀನಿವಾಸಯ್ಯ, ಬೀದಿಯ ಮಕ್ಕಳು ನೀಗ್ರೊ ಎಂದು ಕೂಗುತ್ತಿದ್ದುದನ್ನು ಬರೆಯುತ್ತಾರೆ; ಮನೆಯ ಮಾಲಕರು, ತಮ್ಮ ಶೂಪಾಲಿಶ್ ಮಾಡುತ್ತಿದ್ದುದನ್ನೂ ಬಟ್ಟೆ ಬಗೆದು ಇಸ್ತ್ರಿಹಾಕಿ ಕೊಡುತ್ತಿದ್ದುದನ್ನೂ ದಾಖಲಿಸುತ್ತಾರೆ. ಅವರ ಕಾಲಕ್ಕೆ ಹೋಲಿಸಿದರೆ